# ವರ್ಣರಂಜಿತ ನದಿ

ಕುಂಚದಿಂದ ಮೂಡಿದ ಬಣ್ಣ ಬಣ್ಣದ ಚಿತ್ರವೇನೋ ಎಂಬಂತೆ ಅದ್ಭುತವಾಗಿ ಕಾಣುವ ಪಂಚವರ್ಣದ ಈ ನದಿ ಕೊಲಂಬಿಯಾದಲ್ಲಿದೆ. ಈ ದೇಶದ ಉತ್ತರ ಭಾಗದಲ್ಲಿ, ಮುಖ್ಯ ವಾಹಿನಿಯನ್ನು ಸೇರುವ ಮೊದಲು ಸುಮಾರು ನೂರು ಕಿ.ಮೀ ಗಳಷ್ಟು ದೂರ ಇದು ಪ್ರವಹಿಸುತ್ತದೆ. 'ಕ್ಯಾನೊ ಕ್ರಿಸ್ಟಲ್ಸ್' ಎಂಬ ಹೆಸರುಳ್ಳ ಇದು ಪ್ರಪಂಚದಲ್ಲೇ ಅತ್ಯಂತ ಸುಂದರ ನದಿ ಎಂದು ಖ್ಯಾತಿ ಗಳಿಸಿದೆ.

ಪ್ರತೀ ಋತುಮಾನದಲ್ಲಿಯೂ ವಿವಿಧ ವರ್ಣಗಳಿಂದ ಕಂಗೊಳಿಸುತ್ತಾ, ಪ್ರವಾಸಿಗರ ಮನಸ್ಸಿಗೆ ಮುದವನ್ನು ನೀಡುತ್ತದೆ. ನೀರ ಧಾರೆ ಧುಮ್ಮಿಕ್ಕುವಾಗ ಮೂಡುವ ಕಾಮನಬಿಲ್ಲಿನ ಬಣ್ಣಗಳು ಪ್ರತಿಫಲಿಸುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಶುಭ್ರ ನೀರಿನಡಿ ಇರುವ ಬಣ್ಣ ಬಣ್ಣದ ಪಾಚಿಯು ಈ ನದಿಗೆ ಮತ್ತಷ್ಟು ಸೊಬಗನ್ನು ಸೇರಿಸಿದೆ.

■ ಪ್ರಿಯಾಂಕ





